CC.No.76//2020
Cw-7/Pw-2

**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC.No.76/2020**

**Cw-7 Pw-2**

| | | |
|---|---|---|
| ಸಾಕ್ಷಿದಾರನ ಹೆಸರು | : | ಗೋವಿಂದರಾಜ ತಂದೆ ಗುಂಡಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಮುಖ್ಯಪೇದೆ |
| ವಾಸಸ್ಥಳ | : | ದೇವದುರ್ಗ |
| ಪ್ರಮಾಣೀಕರಿಸಿದ ದಿನಾಂಕ | : | 04-01-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

**2017** ರಿಂದ ಜೂನ್ **2024** ರ ವರೆಗೆ ನಾನು ಜಾಲಹಳ್ಳಿ ಪೊಲೀಸ ಠಾಣೆಯಲ್ಲಿ ಮುಖ್ಯಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **25-02-2020** ರಂದು ಮಧ್ಯಾಹ್ನ **3-00** ಗಂಟೆ ಸಮಯಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ**-1** ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಫಿರ್ಯಾದಿ ಮತ್ತು ಪಂಚನಾಮೆಯನ್ನು ಕೊಟ್ಟಿದ್ದು**,** ಅದರ ಆಧಾರದ ಮೇರೆಗೆ ನಾನು ಠಾಣಾ ಗುನ್ನೆ ನಂ**.20/2020** ನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ**,** ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ**.** ಅದೇದಿನ ಚಾಸಾ**-1** ರವರು ಅಮಾನತುಪಡಿಸಿಕೊಂಡಿರುವ ಮುದ್ದೆಮಾಲುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ದಾಖಲಿಸಿರುತ್ತೇನೆ**.** ಅದೇದಿನ ಚಾಸಾ**-4** ಮತ್ತು **5** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ**.** ಆರೋಪಿಯನ್ನು ಅದೇದಿನ ಬಂಧನದ ನಿಯಮಾವಳಿಗಳನ್ನು ಪಾಲಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ**.** ದಿನಾಂಕ **10-03-2020** ರಂದು ರಾಸಾಯನಿಕ ಪ್ರಯೋಗಾಲಯದ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ**.** ದಿನಾಂಕ **02-05-2020** ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ**.**

ನಿಪಿ**-2** ರ ಮೆಲಿರುವ ಸಾಕ್ಷಿಯ ಸಹಿಯನ್ನು ನಿಪಿ**-2(**ಬಿ**)** ಎಂದು ಗುರುತಿಸಲಾಯಿತು**.** ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ**-3** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ**-3(**ಎ**)** ಎಂದು ಗುರುತಿಸಲಾಯಿತು**.** ರಾಸಾಯನಿಕ ಪ್ರಯೋಗಾಲಯದ ವರದಿಯನ್ನು ನಿಪಿ**-4** ಎಂದು**,** ಸಾಕ್ಷ್ಮಿಯ ಸಹಿಯನ್ನು ನಿಪಿ**-4(**ಎ**)** ಎಂದು ಗುರುತಿಸಲಾಯಿತು**.**

CC.No.76//2020
Cw-7/Pw-2

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಡಿ.ಸಿ ವಕೀಲರಿಂದ.**

ಚಾಸಾ-1 ರವರು ದೂರನ್ನು 3-00 ಗಂಟೆಗೆ ನೀಡಿರುತ್ತಾರೆ. ರಾಸಾಯನಿಕ ಪ್ರಯೋಗಾಲಯಕ್ಕೆ ಮಾದರಿಗಾಗಿ ತೆಗೆದ ಮದ್ಯವನ್ನು ಯಾವ ಸಿಬ್ಬಂದಿ ಮೂಲಕ ಕಳುಹಿಸಿರುತ್ತೇನೆ ಎಂದು ನನಗೆ ಈಗ ಹೇಳಲು ನೆನಪಿರುವುದಿಲ್ಲ. ಅಮಾನತುಪಡಿಸಿಕೊಂಡ ಮದ್ಯ ಪರವಾನಿಗೆ ಪಡೆದ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ದೂರನ್ನು ದಾಖಲಿಸಿದ ದಿನ ಸಂಜೆ 5-00 ಗಂಟೆಗೆ ಸಿಬ್ಬಂದಿಯ ಹೇಳಿಕೆ ಪಡೆದಿರುತ್ತೇನೆ. ಚಾಸಾ-1 ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.